**CC No.3505/2019**
**CW:16**
**PW:02**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ರವರ ನ್ಯಾಯಾಲಯ, ಧಾರವಾಡ.**

**ಸಿಸಿ ನಂಃ 3505/2019**

| | | |
|---|---|---|
| ಸಾಕ್ಷಿದಾರರ ಹೆಸರು | : | ಅಲ್ತಾಫಹುಸೇನ್ ಮುಲ್ಲಾ |
| ತಂದೆಯ ಹೆಸರು | : | ಮೈನುದ್ದೀನ್ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಪಿ.ಐ. ರಾಜ್ಯ ಗುಪ್ತವಾರ್ತೆ |
| ವಾಸ ಸ್ಥಳ | : | ಬೆಂಗಳೂರು. |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ದಿಃ 10.07.2026.**

**ಕಲಂ 299 ರ ಅಡಿ ಮುಖ್ಯ ವಿಚಾರಣೆ:ಮಾನ್ಯ ಹಿಸಸಅ ರವರಿಂದಃ**

ನಾನು 2019 ಜೂನ್ ರಿಂದ ಅಕ್ಟೋಬರ್ 2019 ರವರೆಗೆ ಧಾರವಾಡದ ವಿದ್ಯಾಗಿರಿ ಪೋಲಿಸ ಠಾಣೆಯಲ್ಲಿ ಪ್ರಭಾರ ಪಿ.ಐ.ಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿಃ28.08.2019 ರಲ್ಲಿ ಬೆಳಗ್ಗೆ 11.05 ಗಂಟೆ ಚಾಸಾ.01 ರವರು ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಪಡೆದುಕೊಂಡು ಪ್ರಕರಣವನ್ನು ಗುನ್ನಾ ಸಂಃ125/2019 ರಂತೆ ದಾಖಲಿಸಿ ಪ್ರಥಮ ವರ್ತಮಾನ ವರದಿ ತಯಾರಿಸಿ ಮೂಲ ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೆಸಲ್ಲಿಸಿರುತ್ತೇನೆ. ಈಗ ನೋಡುತ್ತಿರುವ ನಿ.ಪಿ.01 ದೂರಾಗಿರುತ್ತದೆ. ಸಾಕ್ಷೀಯ ಸಹಿಯನ್ನು **ನಿ.ಪಿ.01(ಡಿ)** ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು **ನಿ.ಪಿ.06** ಮತ್ತು ಸಾಕ್ಷೀಯ ಸಹಿಯನ್ನು **ನಿ.ಪಿ.06(ಎ)** ಎಂದು

ಗುರುತಿಸಲಾಯಿತು. ನಂತರ ಪಂಚರಾದ ಚಾಸಾ.02 ಮತ್ತು 03 ರವರಿಗೆ ವಿಚಾರ ತಿಳಿಸಿ ಅವರು ಪಂಚರಾಗಿ ಬರಲು ಒಪ್ಪಿಕೊಂಡಿದ್ದು, ನಾವು ಘಟನಾ ಸ್ಥಳಕ್ಕೆ ಹೋದೆವು. ಚಾಸಾ.01 ರವರು ತೋರಿಸಿದ ಬೆಳ್ಳಿ ಬಂಗಾರದ ವಸ್ತುವಾದ ಕಳ್ಳತನವಾದ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತೇನೇ. ಈಗ ನೋಡುತ್ತಿರು ದಾಖಲೆ ಸದರಿ ಪಂಚನಾಮೆ ಆಗಿರುತ್ತದೆ. ಪಂಚನಾಮೆಯನ್ನು **ನಿ.ಪಿ.07** ಮತ್ತು ಸಾಕ್ಷೀಯ ಸಹಿಯನ್ನು **ನಿ.ಪಿ.07(ಎ)** ಎಂದು ಗುರುತಿಸಲಾಯಿತು. ಸಾಕ್ಷೀಯು ನಿ.ಪಿ.07 ರಲ್ಲಿನ ಚಾಸಾ.02 ಮತ್ತು 03 ರವರು ಸಹಿಗಳನ್ನು ನೋಡಿ ಗುರುತಿಸುತ್ತಾರೆ. ಪಂಚನಾಮೆ ಕಾಲಕ್ಕೆ ಮನೆ ಬಾಗಿಲಿನ ಹತ್ತಿರ ಬಿದ್ದಿದ ಒಂದು ತುಂಡಾದ ಡೆನಿಕ್ಸ ಎಂದು ಬರೆದಿದ್ದ ಕೀಲಿ ಮತ್ತು ಮನೆಯ ಒಳಗಡೆ ಇದ್ದ ಅಲಮೇರಾದ ಬಳಿ ಬಿದ್ದಿದ ಗನ್ನಡಿಯ ಒಡೆದ ಗಾಜಿನ ಚೂರುಗಳು ಅಮಾನತ್ತು ಪಡಿಸಿರುತ್ತೇನೆ. ಈಗನೋಡುತ್ತಿರುವ ನಿ.ಪಿ.02 ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರ ಆಗಿದ್ದು, ಎಂ.ಒ.01 ಮತ್ತು 02 ಸದರಿ ಮುರಿದ ಕೀಲಿ ಮತ್ತು ಗಾಜಿನ ಚೂರುಗಳಾಗಿದ್ದವು. ಪಂಚನಾಮೆ ಕಾಲಕ್ಕೆ ಕಚ್ಚಾ ನಕ್ಷೆಯನ್ನು ತಯಾರಿಸಿ ಭಾವಚಿತ್ರ ತೆಗೆಸಿರುತ್ತೇನೆ. ಸದರಿ ಅಲಮೇರಾದಬಾಗಿಲನ್ನು ಮುರಿಯಲು ಪ್ರಯತ್ನಿಸಿದ ಬಗ್ಗೆ ನಿಶಾನೆ ಇತ್ತು. ಅಮ ನತ್ತು ಪಡಿಸಿಕೊಂಡ ವಸ್ತುಗಳನ್ನು ಪಿ.ಎಫ.ಗೆ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ.06 ರಿಂದ 10 ರವರ ಹೇಳಿಕೆ ಪಡೆದಿರುತ್ತೆನೆ.

**CC No.3505/2019**
**CW:16**
**PW:02**

ದಿಃ14.09.2019 ರಂದು ಚಾಸಾ.12 ರವರು ಆರೋಪಿಯನ್ನು ನನ್ನ ಮುಂದೆ ಹಾಜರು ಪಡಿಸಿದ್ದು ಅವರ ನೀಡಿದ ವರದಿಯನ್ನು ಸ್ವೀಕರಿಸಿರುತ್ತೆನೆ. ಈಗ ನೋಡುತ್ತಿರುವ ದಾಖಲೆ ಸದರಿ ವರದಿ ಆಗಿರುತ್ತದೆ. ವರದಿಯನ್ನು **ನಿ.ಪಿ.08** ಹಾಗೂ ಸಾಕ್ಷೀಯ ಸಹಿಯನ್ನು **ನಿ.ಪಿ.08(ಎ)** ಎಂದು ಗುರುತಿಸಲಾಯಿತು. ನಾನು ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದ್ದು ಅವರು ಕಳ್ಳತನ ಮಾಡಿರುವುದಾಗಿ ಒಪ್ಪಿ ಕೊಂಡ ಮೇರೇಗ ಅವರ ವಿರುದ್ದ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ಆರೋಪಿಯು ಸ್ವಇಚ್ಚಾ ಹೇಳಿಕೆಯನ್ನು ನೀಡಿರುತ್ತಾರೆ. ತನ್ನ ಸ್ವಇಚ್ಚಾ ಹೇಳಿಕೆಯಲ್ಲಿ ಆರೋಪಿಯು ತನ್ನ ಬಳಿ ಕಳ್ಳತನ ಮಾಡಿದ ಆಭರಣಗಳು ಮತ್ತು ಕಳ್ಳತನಕ್ಕೆ ಬಳಸಿದ ಕಬ್ಬಿಣದ ರಾಡ್ ಇರುವುದಾಗಿ ಹೇಳಿದರು. ನಂತರ ಪಂಚರಾದ ಚಾಸಾ.04 ಮತ್ತು 05 ಮತ್ತು ಅಕ್ಕಸಾಲಿಗರಾದ ಚಾಸಾ.11 ರವರನ್ನು ಹಾಜರು ಪಡಿಸಿಕೊಂಡು ಅವರಿಗೆ ವಿಚಾರ ತಿಳಿಸಿದೆ. ನಂತರ ಆರೋಪಿಯ ಅಂಗಶೋದನೆ ಮಾಡಲಾಗಿ ಅವರಿಂದ ಬಂಗಾರದ ಆಭರಣಗಳನ್ನು ಮತ್ತು ಕಬ್ಬಿಣ ರಾಡ್ ನ್ನು ಅಮಾನತ್ತು ಪಡಿಸಿರುತ್ತೇನೆ. ಈಗ ನೋಡುತ್ತಿರುವ ದಾಖಲೆ ಆರೋಪಿಯ ಸ್ವಇಚ್ಚಾ ಹೇಳಿಕೆ ಆಗಿರುತ್ತದೆ. ಸ್ವಇಚ್ಚಾ ಹೇಳಿಕೆಯನ್ನು **ನಿ.ಪಿ.09** ಎಂದು ಗುರುತಿಸಲಾಯಿತು. ನಿ.ಪಿ.09 ಕ್ಕೆ ಆರೋಪಿಯು ತಮ್ಮ ಹೆಬ್ಬಟ್ಟಿನ ಗುರುತನ್ನು ಹಾಕಿರುತ್ತಾರೆ. ಆರೋಪಿಯು ತನ್ನ ಸ್ವಇಚ್ಚಾ ಹೇಳಿಕೆಯಲ್ಲಿ ತಾನು ಮುಚ್ಚಿಇಟ್ಟಿದ್ದ ಬೆಳ್ಳಿ ಬಂಗಾರದ ಸಾಮಾನುಗಳನ್ನು ಮಾರಾಟ ಮಾಡಲು ಹುಬ್ಬಳ್ಳಿಗೆ ಹೋಗಲು ಟೋಲ್ ನಾಕಾಹತ್ತಿರ ಬಸ್ ಸ್ಟೋಪ ಬಳಿ ನಿಂತಾಗ ಪೋಲೀಸ್ ರು ನನ್ನನ್ನು ಹಿಡಿದುಕೊಂಡು ಠಾಣೆಗೆತಂದಿರುತ್ತಾರೆಂದು

ಹೇಳಿರುತ್ತಾರೆ. ಸದರಿ ಹೇಳಿಕೆ ಭಾಗವನ್ನು **ನಿ.ಪಿ.09(ಎ)** ಎಂದು ಗುರುತಿಸಲಾಯಿತು. ನಿ.ಪಿ.09 ರಲ್ಲಿನ ಸಾಕ್ಷಿಯ ಸಹಿಯನ್ನು **ನಿ.ಪಿ.09(ಬಿ)** ಎಂದು ಗುರುತಿಸಲಾಯಿತು.

ಆರೋಪಿಯಿಂದ 08 ಬಂಗಾರದ ಐಟಂಗಳು ಮತ್ತು 02 ಬೆಳ್ಳಿಯ ಐಟಂಗಳನ್ನು ಹಾಗೂ ಒಂದು ಕಬ್ಬಿಣದ ರಾಡ್ ನ್ನು ವಶಪಡಿಸಿಕೊಕಂಡಿರುತ್ತೇನೆ. ಆ ಸಮಯದಲ್ಲಿ ಭಾವಚಿತ್ರ ತೆಗೆಸಿರುತ್ತೇನೆ. ಈಗನೋಡುತ್ತಿರುವ ದಾಖಲೆ ಅಮಾನತ್ತು ಪಂಚನಾಮೆ ಆಗಿರುತ್ತದೆ. ಅಮಾನತ್ತು ಪಂಚನಾಮೆಯನ್ನು **ನಿ.ಪಿ.10** ಎಂದು ಗುರುತಿಸಲಾಯಿತು. ನಿ.ಪಿ.10 ಕ್ಕೆ ಚಾಸಾ.04, 05 ಮತ್ತು 11 ರವರು ಸಹಿ ಮಾಡಿದ್ದು ಆರೋಪಿಯು ಹೆಬ್ಬಟ್ಟಿನ ಗುರುತು ಹಾಕಿರುತ್ತಾರೆ. ಈಗನೋಡುತ್ತಿರುವ ದಾಖಲೆಗಳು ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರ ಗಳಾಗಿರುತ್ತವೆ ಅವುಗಳನ್ನು **ನಿ.ಪಿ.11 ರಿಂದ 14** ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಚಾಸಾ.11 ರವರು ಸಿಕ್ಕ ಬಂಗಾರ ಮತ್ತುಬೆ ಳ್ಳಿಯ ಆಭರಣಗಳನ್ನು ಪರೀಕ್ಷಿಸಿ ತೂಕ ಮಾಡಿರುತ್ತಾರೆ. ಸಿಕ್ಕ ಬೆಳ್ಳಿ ಮತ್ತು ಬಂಗಾರದ ಆಭರಣಗಳನ್ನು ಪಿ.ಎಫಗೆ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೆನೆ. ಅದೆ ದಿನ ಆರೋಪಿಯನ್ನು ಮಾನ್ಯ ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತೇನೆ. ಚಾಸಾ.01 ಮತ್ತು 06 ರವರು ಮರು ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ.11, 13 ರಿಂದ 15 ರವರ ಹೇಳಿಕೆ ಗಳನ್ನು ಪಡೆದುಕೊಂಡಿರುತ್ತೇನೆ. ದಿಃ28.09.2019 ರಂದು ತನಿಖೆ ಪೂರ್ಣಗೊಳಿಸಿ ಅಂತಿಮ ವರದಿಯನ್ನು

**CC No.3505/2019**
**CW:16**
**PW:02**

ಸಲ್ಲಿಸಿರುತ್ತೇನೆ. ಮೇಲೆ ಹೇಳಿದ ಆರೋಪಿಯನ್ನುನೋಡಿದರೆ ಗುರುತಿಸುತ್ತೇನೆ. ಈಗ ನೋಡುತ್ತಿರುವ ನಿ.ಪಿ.11 ರಿಂದ 14 ರಲ್ಲಿ ಪಿಂಕ ಬಣ್ಣದ ಶರ್ಟ ಧರಿಸಿದ ವ್ಯಕ್ತಿ ಆರೋಪಿ ಆಗಿರುತ್ತಾನೆ.

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.**